# ಇತಿಹಾಸದ ಮಹಾಪುರುಷರು

ಇತಿಹಾಸ ನಿರ್ಮಾಣವಾಗುವ ಬಗೆ ಕುತೂಹಲಕಾರಿಯಾದದ್ದು. ಯಾವುದನ್ನು ಇತಿಹಾಸವೆನ್ನಲಾಗುತ್ತದೆ? ನಂಬಿಕೆಗಳನ್ನೊ, ಘಟನೆಗಳನ್ನೊ ಅಥವಾ ಅವುಗಳಿಗೆ ಕಾರಣರಾದ ವ್ಯಕ್ತಿಗಳನ್ನೊ? ಇವು ಕಾಲಕಾಲಕ್ಕೆ ಬದಲಾಗುತ್ತಿರಲೂಬಹುದು. ಪ್ರಾಜ್ಞರು ಇದುವರೆಗೆ ಇತಿಹಾಸವನ್ನು ಮೂರು ದೃಷ್ಟಿಕೋನಗಳಿಂದ ನೋಡಿದ್ದಾರೆ. ಮೊದಲನೆಯದು ಅಗಸ್ಟೈನನ ಇತಿಹಾಸ ತತ್ವ. ಅದು ದೈವ ನಿರ್ದೇಶಿತವಾದದ್ದು. ಎಲ್ಲವೂ ಪೂರ್ವನಿಯಾಮಕ. ಮನುಷ್ಯಮಾತ್ರನಿಗೆ ಎಟುಕಲಾರದ್ದು. ಅದು ಖಂಡಿತವಾಗಿಯೂ ಯುದ್ಧ ಮತ್ತು ಸಂಕಷ್ಟಗಳಿಂದ ಕೂಡಿದ ಕಾಲಮಾನ. ಅದು ದೇವರ ನಿರ್ಣಾಯಕ ದಿನದವರೆಗೂ (day of judgement) ಮುಂದುವರೆಯುವುದು. ಇದು ದೈವಾರಾಧಕರು ಮತ್ತು ಆಸ್ತಿಕರು ಮಾತ್ರ ನಂಬುವಂಥ ಸಿದ್ಧಾಂತ. ನಂತರ ಬಂದ ಬಕಲ್‌ನ ಪ್ರಕಾರ ಇತಿಹಾಸವು ಭೂಗೋಳ ಮತ್ತು ಭೌತಶಾಸ್ತ್ರಗಳಿಂದ ನಿರ್ಧರಿಸಲ್ಪಡುತ್ತದೆ. ಮೂರನೆಯದಾಗಿ ಕಾರ್ಲ್ ಮಾರ್ಕ್ಸ್‌ನ ಪ್ರಖ್ಯಾತ ಹೇಳಿಕೆ; ಇತಿಹಾಸವನ್ನು ಆರ್ಥಿಕ ಶಕ್ತಿಗಳು ರೂಪಿಸುತ್ತವೆ ಎಂಬುದು. ಬಕಲ್ ಮತ್ತು ಮಾರ್ಕ್ಸ್ ಹೇಳಿಕೆಗಳಲ್ಲಿ ಭಾಗಶಃ ಸತ್ಯವಿದೆ. ಅವೇ ಪೂರ್ಣಸತ್ಯವಲ್ಲ. ಯಾಕೆಂದರೆ ಇತಿಹಾಸ ನಿರ್ಮಿತಿಯಲ್ಲಿ ತತ್ವ ಸಿದ್ಧಾಂತಗಳನ್ನಷ್ಟೆ ಗುರುತಿಸಲಾಗಿದ್ದು ಮನುಷ್ಯ ಪ್ರಯತ್ನವನ್ನು ಗೌಣವಾಗಿಸಲಾಗಿದೆ. ಸಿದ್ಧಾಂತಗಳು ಮುಖ್ಯವೆಂಬುದನ್ನು ಅಲ್ಲಗಳೆಯಲಾಗದಿದ್ದರೂ ಅದರ ಹಿಂದಿನ ಮನುಷ್ಯ ಪ್ರಯತ್ನ ಮತ್ತು ಸಾಧನೆಗಳನ್ನು ಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆಯಿದೆ. ಬೆಣಚುಕಲ್ಲು ಇರುವುದು ನಿಜ, ಅದರಿಂದ ಬೆಂಕಿ ಹೊರಬರಬೇಕಾದರೆ ಅದನ್ನು ಯಾರಾದರೂ ಇನ್ನೊಂದು ಬೆಣಚುಕಲ್ಲಿನ ಜತೆ ಉಜ್ಜಲೇಬೇಕು. ಬೀಜವನ್ನು ಬಿತ್ತಿ ಸಸಿಮಾಡಿ, ಗೊಬ್ಬರ ಹಾಕಿ ಬೆಳೆ ತೆಗೆಯುವುದು, ಲೋಹವನ್ನು ಕಾಸಿ ಹದ ಮಾಡಿ ಸಲಕರಣೆಗಳನ್ನು ತಯಾರಿಸಿ ನಾಗರಿಕ ಸಮಾಜದ ಉಪಯೋಗಕ್ಕೆಡುವುದು, ಇವೆಲ್ಲದರ ಹಿಂದೆ ಮನುಷ್ಯ ಪ್ರಯತ್ನ ಇದ್ದೇ ಇದೆ.

ಒಟ್ಟಾರೆ ಇತಿಹಾಸ ನಿರ್ಮಾಣವಾಗುವುದು ಆಯಾ ಕಾಲಮಾನದ ಜನರಿಂದ. ಇತಿಹಾಸ ನಿರ್ಮಿತಿಯಲ್ಲಿ ನೇರ ಭಾಗಿಯದವರನ್ನು ಆ ಜನ ವಿಶಿಷ್ಟವಾಗಿ ಗುರುತಿಸುತ್ತಾರೆ. ಅಂಥವರನ್ನು ಮಹಾಪುರುಷರೆಂದು ಕರೆಯುತ್ತಾರೆ. ಈ ಮಹಾಪುರುಷರು ಅಥವಾ ಮಹಾಮಹಿಳೆಯರು ಹೇಗಿರುತ್ತಾರೆ, ಸಾಮಾನ್ಯ ಜನರಿಗಿಂಥ ಇವರು ಹೇಗೆ ಭಿನ್ನವಾಗಿರುತ್ತಾರೆ? ಹಿಂದಿನ ಕಾಲದಲ್ಲಿ ರಾಜರು, ದೊರೆಗಳು ಸಹಜವಾಗಿಯೆ ನಾಯಕರೆನಿಸಿಕೊಳ್ಳುತ್ತಿದ್ದರು. ಕೆಲವರು ಯುದ್ಧ ಮಾಡಿ ದೇಶಕೋಶಗಳನ್ನು ಗೆಲ್ಲುತ್ತಿದ್ದರು. ಕಾಡಿನಲ್ಲಿ ಪ್ರಾಣಿಗಳ ಮಧ್ಯೆ ಸಿಂಹದಂತೆ ಗರ್ಜಿಸುತ್ತಿದ್ದ ಅವರಲ್ಲಿಯೂ ಕೆಲವರು ಮಹಾನಾಯಕರೆನಿಸಿಕೊಳ್ಳುತ್ತಿದ್ದರು. ಅಲೆಕ್ಸಾಂಡರ್, ಅಶೋಕ, ಸೀಸರ್ ಮುಂತಾದವರನ್ನು ಹಾಗೆ ಹೆಸರಿಸಬಹುದು.

ದೊಡ್ಡಮನುಷ್ಯನಾದವನಿಗೆ ಇರಬೇಕಾದ ಬಹಳ ಮುಖ್ಯವಾದ ಗುಣವೆಂದರೆ ಹೃದಯವಂತಿಕೆ, ಆಳವಾದ, ನೈಜವಾದ ಹೃದಯವಂತಿಕೆ ಎಂದು ಕಾರ್ಲೈಲ್ ಹೇಳುತ್ತಾನೆ. ನೆಪೋಲಿಯನ್‌ನ ಮಹತ್ವವನ್ನು ಹೇಳುವಾಗ ಲಾರ್ಡ್ ರೋಸ್‌ಬೆರಿ ಅವನು ಬುದ್ಧಿಬಲ ಮತ್ತು ದೇಹಬಲಗಳ ಅಪರೂಪದ ಸಂಗಮ ಎಂದು ವರ್ಣಿಸುತ್ತಾನೆ. ತತ್ವಜ್ಞಾನಿಗಳ ಪ್ರಕಾರ ಒಬ್ಬ ಮಹಾಪುರುಷ ನೇರವಾಗಿ ಭೂಮಿಗೆ ಎಸೆಯಲ್ಪಟ್ಟವನು. ಆತನಿಗೆ ಮಾನವಾತೀತ ಗುಣಗಳಿರುತ್ತವೆ. ಅವನಿಂದ ಕಾಲಕಾಲಕ್ಕೆ ದುಷ್ಟ ನಿಗ್ರಹ, ಶಿಷ್ಟ ರಕ್ಷಣೆ ನಡೆಯುತ್ತಿರುತ್ತದೆ. ಅವನು ಈ ಸಮಾಜದ ಕೊಳೆಯನ್ನು ತೊಳೆದು ಪ್ರಜೆಗಳನ್ನು ಸರಿದಾರಿಯಲ್ಲಿ ಕೊಂಡೊಯ್ಯಬಲ್ಲವನು ಎಂದು ನಂಬಲಾಗುತ್ತದೆ. ಇವುಗಳಲ್ಲಿ ಯಾವುದು ಸರಿ? ಎಲ್ಲವೂ ಆಂಶಿಕವಾಗಿ ಸರಿ. ಒಬ್ಬ ಮಹಾಪುರುಷನಿಗೆ ಹೃದಯವಂತಿಕೆ ಇರಬೇಕು ನಿಜ. ಅದರ ಜತೆಗೆ ಬುದ್ಧಿಬಲವೂ ಇರಬೇಕು. ಆದರೆ ಅದಕ್ಕೊಂದು ಮಿತಿಯಿದೆ. ಸಂದಿಗ್ಧದಲ್ಲಿ ಉತ್ತಮ ತೀರ್ಮಾನ ಕೈಗೊಳ್ಳುವವನೆ ಒಳ್ಳೆಯ ನಾಯಕನಾಗುತ್ತಾನೆ. ಆದ್ದರಿಂದ ಚತುರಮತಿಯಾದ ಹೃದಯವಂತನಿಗೆ ನೈತಿಕ ಗುಣಗಳೂ, ವ್ಯವಹಾರ ನೈಪುಣ್ಯವೂ ಇರಬೇಕಾಗುತ್ತದೆ. ಇಷ್ಟೆಯಾದರೆ ಸಾಕೆ? ಮಹಾಪುರುಷ ಎಂದೆನಿಸಿಕೊಳ್ಳಬೇಕಾದರೆ ಇವೆಲ್ಲವೂ ಸಾಕಾರಗೊಂಡು ಮತ್ತಷ್ಟು ಎತ್ತರದ ವ್ಯಕ್ತಿತ್ವವನ್ನು ಬಯಸುತ್ತದೆ. ಅವನಿಗೊಂದು ಸಾರ್ವತ್ರಿಕವಾದ ಉದ್ದೇಶವಿರುತ್ತದೆ. ಭವಿಷ್ಯದ ಮುನ್ನೋಟವಿರುತ್ತದೆ. ಧೈರ್ಯಶಾಲಿಯಾಗಿ ನಿರ್ಣಯಗಳನ್ನು ತೆಗೆದುಕೊಂಡು ಸಮಾಜವನ್ನು ದಂಡಿಸಬಲ್ಲವನೂ, ಶುದ್ಧಗೊಳಿಸಬಲ್ಲವನೂ ಆಗಿರುತ್ತಾನೆ. ಅಂಥವನು ಮಹಾಪುರುಷನಾಗುತ್ತಾನೆ.

ಅಂಗುತ್ತರ ನಿಕಾಯದಲ್ಲಿ ಬುದ್ಧ ಒಬ್ಬ ವ್ಯಕ್ತಿ ಐದು ತೆರನಾದ ಸಂಪತ್ತನ್ನು ಹೊಂದಬೇಕು ಎಂದು ಹೇಳುತ್ತಾನೆ. ಅವುಗಳೆಂದರೆ; ನಂಬಿಕೆ, ಸಚ್ಚಾರಿತ್ರ್ಯ, ವಿದ್ಯೆ, ಉದಾತ್ತತೆ ಮತ್ತು ಪ್ರಜ್ಞೆ. ಬುದ್ಧ ಇವುಗಳನ್ನು ಸಂಪತ್ತು ಎಂದು ಕರೆದುದು ವಿಚಾರಪೂರ್ಣವಾಗಿದೆ. ಇವು ಒಂದಕ್ಕೊಂದು ಪೂರಕವಾಗಿವೆ. ನಂಬಿಕೆಯಿಲ್ಲದ ಚಾರಿತ್ರ್ಯ, ಇವೆರಡೂ ಇಲ್ಲದ ವಿದ್ಯೆ ಯಶಸ್ಸು ತಂದುಕೊಡಲಾರವು. ಇವೆಲ್ಲವನ್ನೂ ಧನಸಂಪತ್ತಿನೊಂದಿಗೆ ಇತರರೊಡನೆ ಹಂಚಿಕೊಳ್ಳುವುದೇ ಉದಾತ್ತ ಗುಣ. ತನ್ನನ್ನೂ ಮತ್ತು ಇತರರನ್ನೂ ನಿಯಂತ್ರಿಸುವ ಸದ್ವಿವೇಕ ಇರುವುದು ಪ್ರಜ್ಞೆಗೆ. ಹಾಗಾಗಿ ಮಹಾಪುರುಷನೊಬ್ಬ ಈ ಐದು ಸಂಪತ್ತುಗಳನ್ನು ಹೊಂದಿರುತ್ತಾನೆ.

■ ಮೂಚಿ

## ಮಾತೇ ಮುತ್ತು

★ ಅನ್ನವನು ಇಕ್ಕುವ ಅನ್ಯಜಾತನೆ ಕುಲಜ.
-ಸರ್ವಜ್ಞ

★ ಕಳೆದುಹೋದ ಸುಖವನ್ನು ನೆನಪಿಸಿಕೊಳ್ಳುವುದೇ ದುಃಖಗಳಲ್ಲಿ ದೊಡ್ಡ ದುಃಖ.
-ಷೇಕ್ಸ್‌ಪಿಯರ್

★ ನಿನ್ನ ದೊಡ್ಡ ನೆರಳನ್ನು ನೋಡಿ ಹೆದರುವ ಅಥವಾ ಭಯ ಪಡುವ ಕಾರಣವಿಲ್ಲ. ಅದು ನಿನ್ನ ಗುಲಾಮ. ನಿನ್ನ ಆಜ್ಞೆಯಂತೆ ನಡೆಯುತ್ತದೆ. ನೀನು ನಿಂತರೆ ಅದೂ ನಿಲ್ಲುವುದು, ನೀನು ಕುಳಿತರೆ ಅದೂ ಕುಳಿತುಕೊಳ್ಳುವುದು.
-ವಿನೋಬಾ ಭಾವೆ

★ ಪ್ರತಿಭೆ ಎಂದರೆ ಕಷ್ಟವನ್ನು ಮೊದಲೇ ಎದುರಿಸುವ ಶಕ್ತಿ.
- ಆಸ್ಕರ್ ವೈಲ್ಡ್

★ ಈ ಜಗತ್ತಿನ ದೊಡ್ಡ ಸಮಸ್ಯೆಯೆಂದರೆ, ಮೂರ್ಖರು ಮತ್ತು ಮತಾಂಧರು ತಮ್ಮ ಆಲೋಚನೆಗಳ ಬಗ್ಗೆ ಯಾವತ್ತೂ ಖಚಿತವಾಗಿರುತ್ತಾರೆ; ಆದರೆ ಬುದ್ಧಿವಂತರು ಸದಾ ಗೊಂದಲದಲ್ಲಿ ಇರುತ್ತಾರೆ.
-ಬರ್ಟ್ರೆಂಡ್ ರಸೆಲ್

★ ಪ್ರಜೆಗಳನ್ನು ಹಸಿವು ಮತ್ತು ಅಂಧಕಾರದಲ್ಲಿ ಮುಳುಗಿಸುವ ಯಾವುದೇ ಧರ್ಮವನ್ನು ನಾನು ಇಷ್ಟಪಡುವುದಿಲ್ಲ.
-ಜವಹರ್‌ಲಾಲ್ ನೆಹರೂ

★ ಮನುಷ್ಯನೊಬ್ಬ ಅತ್ಯುತ್ತಮವಾದದ್ದನ್ನು ಸಾಧಿಸಿದರೆ, ಮತ್ತೆ ಆತನಿಗೆ ಇನ್ನೇನು ಉಳಿಯುತ್ತದೆ?
-ಜನರಲ್ ಜಾರ್ಜ್ ಎಸ್ ಪ್ಯಾಟನ್

★ ಶಾಂತಿ ನಮ್ಮೊಳಗಿನಿಂದ ಬರುವಂಥದ್ದು, ಅದನ್ನು ಹೊರಗಿನಿಂದ ನಿರೀಕ್ಷಿಸಬೇಡಿ.
-ಗೌತಮ ಬುದ್ಧ

★ ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೇ ಹೊರತು ಒಡೆಯಬಾರದು.
-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ವೇಗವಾಗಿ ಬರೆಯುವ ಯಾವನಿಗಿಂತಲೂ ಉತ್ತಮವಾಗಿ ನಾನು ಬರೆಯಬಲ್ಲೆ; ಹಾಗೆಯೇ ಉತ್ತಮವಾಗಿ ಬರೆಯುವವನಿಗಿಂತ ವೇಗವಾಗಿಯೂ ನಾನು ಬರೆಯಬಲ್ಲೆ.
-ಎ.ಜೆ.ಲೀಬ್ಲಿಂಗ್

★ ನಿಮಗೆ ಯುದ್ಧದಲ್ಲಿ ಆಸಕ್ತಿ ಇಲ್ಲದಿರಬಹುದು, ಆದರೆ ಯುದ್ಧಕ್ಕೆ ನಿಮ್ಮ ಬಗ್ಗೆ ಆಸಕ್ತಿ ಇದೆ.
-ಲಿಯೋನ್ ಟ್ರಾಟ್‌ಸ್ಕಿ